ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
**Central College Campus, Dr.AmbedkarVeedhi, Bengaluru,**
**E-mail ID: registrarevlubcu@gmail.com, Ph.No: 22295559**

ಸಂಖ್ಯೆ: ಬಿಸಿಯು/01/ಪ.ವಿ./ಪ.ಶು.ಅಧಿಸೂಚನೆ/2020 /1632 ದಿನಾಂಕ: 29.07.2020

## ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಪರೀಕ್ಷಾ ವಿವರಗಳು

ಕೋವಿಡ್–19 ನ ವ್ಯಾಪಕತೆಯಿಂದಾಗಿ 2019–20 ನೇ ಸಾಲಿನ ಮುಂದೂಡಲ್ಪಟ್ಟಿದ್ದ ಪರೀಕ್ಷೆಗಳು ನಾಲ್ಕನೇ ಸೆಮಿಸ್ಟರ್‌ನ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ದಿನಾಂಕ 1.09.2020 ರಿಂದ 14.09.2020 ರವರೆಗೆ ನಾಲ್ಕನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದು ಎರಡನೇ ಸೆಮಿಸ್ಟರ್‌ನಲ್ಲಿ ಬಾಕಿ ಉಳಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ದಿನಾಂಕ 22.09.2020 ರಿಂದ 30.09.2020 ರವರೆಗೆ ನಿಗದಿಗೊಳಿಸಲಾಗಿದೆ ಮತ್ತು ಈ ಸಂಬಂಧ ವಿಶ್ವವಿದ್ಯಾಲಯವು ದಿನಾಂಕ 14.07.2020 ರಂದು Notification ಹೊರಡಿಸಿದ್ದು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿದೆ.

ನಾಲ್ಕನೇ ಸೆಮಿಸ್ಟರ್‌ನ ಪ್ರಾಯೋಗಿಕ ಪರೀಕ್ಷೆಗಳು ಮತ್ತು ಪ್ರಾಜೆಕ್ಟ್ ವರ್ಕ್/ ಕ್ಷೇತ್ರ ಕಾರ್ಯಗಳ ಮೌಖಿಕ ಪರೀಕ್ಷೆಗಳು ದಿನಾಂಕ 15.09.2020 ರಿಂದ 21.09.2020 ರೊಳಗೆ ನಡೆಸಲು ನಿಗದಿಪಡಿಸಲಾಗಿದೆ. ಸ್ನಾತಕೋತ್ತರ ಎರಡನೇ ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಪಾವತಿಸಲು ಮತ್ತು ಪರೀಕ್ಷೆ ಅರ್ಜಿಗಳನ್ನು ಸಲ್ಲಿಸಲು 24.07.2020 ರಂದು ವಿಶ್ವವಿದ್ಯಾಲಯದಿಂದ Notification ಹೊರಡಿಸಲಾಗಿದೆ.

ಕರ್ನಾಟಕ ಸರ್ಕಾರದ ದಿನಾಂಕ 10.07.2020 ರ ಆದೇಶದಂತೆ IIನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಲಾಗುವುದಿಲ್ಲ ಬದಲಾಗಿ ಆಂತರಿಕ ಅಂಕಗಳು ಮತ್ತು ಹಿಂದಿನ ಸೆಮಿಸ್ಟರ್‌ನ (ಲಭ್ಯವಿದ್ದಲ್ಲಿ) ಅಂಕಗಳ ಸರಾಸರಿಯ ಆಧಾರದಲ್ಲಿ ಫಲಿತಾಂಶ ಪ್ರಕಟಿಸಲಾಗುವುದು. IIನೇ ಸೆಮಿಸ್ಟರ್ ವಿದ್ಯಾರ್ಥಿಗಳು ಸಹ ಪರೀಕ್ಷಾ ಶುಲ್ಕ ಪಾವತಿಸುವುದುಮತ್ತು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಕೊನೆಯ ದಿನಾಂಕ 15.08.2020.

IV ನೇ ಸೆಮಿಸ್ಟರ್ ವಿದ್ಯಾರ್ಥಿಗಳೂ ಸಹ ದಿನಾಂಕ 15.08.2020 ರೊಳಗೆ ಪರೀಕ್ಷಾ ಶುಲ್ಕ ಪಾವತಿಸಿ, ಪರೀಕ್ಷಾ ಅರ್ಜಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿದ್ದು, ಕೊನೆಯ ದಿನಾಂಕ 15.08.2020

29/7

ಕುಲಸಚಿವರು(ಮೌಲ್ಯಮಾಪನ)
Registrar (Evaluation)
Bengaluru Central University
Central College Campus
Bengaluru - 560 001.

ಗೆ,

1. ಸಂಬಂಧಪಟ್ಟ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಪ್ರಾಂಶುಪಾಲರುಗಳಿಗೆ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು.
2. ವೆಬ್‌ಸೈಟ್ ನಿರ್ವಾಹಕರು , ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು.

ಪ್ರತಿಗಳು:

ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ)/ವಿತ್ತಾಧಿಕಾರಿಯವರ ವಿಶೇಷಾಧಿಕಾರಿಗಳಿಗೆ.